# ದಿಂಬಿನಡಿಯಲ್ಲೊಂದು ವಿಷನಾಗ

■ ಯಂಡಮೂರಿ ವೀರೇಂದ್ರನಾಥ್

ಕನ್ನಡಕ್ಕೆ: ಸಂಡೂರು ವೆಂಕಟೇಶ್

ಕಲೆ: ಮನೋಹರ್ ಆಚಾರ್ಯ



## 'ಬಟರ್‌ಫ್ಲೈ ಎಫೆಕ್ಟ್'

ಅಲ್ಲಿಗೆ ಕರೆದೊಯ್ದವನು ಮಿಜ್ರಾಡಿನ್... ಬಿನ್ ಲಾಡೆನ್‌ನಷ್ಟೇ ಕ್ರೂರಿ. ಕೇವಲ ಅಪ್ಪನನ್ನು ಕರೆದೊಯ್ಯಲು ಇಷ್ಟು ದೂರ ಬಂದಿದ್ದಾನೆಂದರೆ, ಅಪ್ಪನ ಮೇಲೆ ಅವನಿಗೆ ಅದೆಷ್ಟು ಸೇಡು ಸಿಟ್ಟು ಇರಬಹುದೋ ಊಹಿಸಿಕೊಳ್ಳಿ. ಊಹಿಸಿದ ಹಾಗೆಲ್ಲ ಮನಸ್ಸು ಚಡಪಡಿಸುತ್ತದೆ.'

'ನಮ್ಮವರು ಹತ್ತು ಟೀಮ್‌ಗಳಲ್ಲಿ, ಹತ್ತು ಕಡೆ ಹುಡುಕುತ್ತಿದ್ದಾರೆ. ಖಂಡಿತ ಹಿಡಿಯುತ್ತಾರೆ.'

'ನನಗೆ ನಂಬಿಕೆ ಇಲ್ಲ. ಕಾಶ್ಮೀರ್‌ನಿಂದ ಬಹಿರಂಗವಾಗಿ ಇಷ್ಟು ದೂರ ಟ್ರೇನ್‌ನಲ್ಲಿ ಬಂದಿದ್ದಾನೆಂದರೆ ತನ್ನ ಮೇಲೆ ಅವನಿಗೆ ಎಷ್ಟು ನಂಬಿಕೆ ಇದೆಯೋ ಅರ್ಥವಾಗುತ್ತದೆ. ಅವನು ಹಾವಿನಂತಹವನು, ನಿಮಗೆ ಸಿಗದೆ ಜಾರಿಕೊಳ್ಳುತ್ತಾನೆ'.

'ನಮ್ಮ ಡಿಪಾರ್ಟ್‌ಮೆಂಟ್‌ನಲ್ಲೂ ಅವನಿಗೆ ಅದೇ ಹೆಸರಿದೆ. ಮಿಜ್ರಾಡಿನ್... ನಾಜಿಯಾ.. ಗುಲ್ಜಾರ್ ಎಲ್ಲ ಸೇರಿಸಿ 'ಮಿನ್ನಾಗು (ಮಿಡಿನಾಗರ) ಎಂದು ಕರೆಯುತ್ತೇವೆ'

ಅವಳು ಅವನ ಮಾತಿಗೆ ಗಮನಕೊಡಲಿಲ್ಲ. ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಾ 'ಅಪ್ಪ ಬಾಯಿ ಬಿಡುವುದಿಲ್ಲ. ವಿವರಗಳನ್ನು ಹೇಳುವವರೆಗೆ ಅವರು ಬಿಡುವುದಿಲ್ಲ... ಅವರ ಚರ್ಮ ಸುಲಿಯುತ್ತಾರೆ, ಕಣ್ಣು ಕೀಳುತ್ತಾರೆ... ಆ ವೃದ್ಧ ನೋವು ಸಹಿಸಲಾರರು, ಆದರೂ ಹೇಳುವುದಿಲ್ಲ. ಪ್ರಾಣ ಬೇಕಾದರೂ ಕೊಡುತ್ತಾರೆ, ಆದರೆ ಹೇಳುವುದಿಲ್ಲ. ಕಮ್ಯಾಂಡೋಗಳು ಹುಡುಕುತ್ತಲೇ ಇರುತ್ತಾರೆ. ಮನುಷ್ಯ ಸಿಗುವುದಿಲ್ಲ, ಶವ ಸಿಗುತ್ತದೆ. ಆ ರೀತಿ ಆಗಬಾರದೆಂದರೆ ಆದಷ್ಟು ಬೇಗ ಆ ಹಾವನ್ನು ಹಿಡಿಯಬೇಕು. ಯಜ್ಞ ಮಾಡಿದಷ್ಟೇ ಏಕಾಗ್ರತೆಯಿಂದ ಪ್ಲಾನ್ ಮಾಡಬೇಕು. ಜನಮೇಜಯನ ಹಾಗೆ ಹಾವನ್ನು ಹುತ್ತದಿಂದ ಹೊರಗೆ ಬರಿಸಬೇಕು'

'ಜನಮೇಜಯನೇ? ಯಾರವನು?'

'ತನ್ನ ತಂದೆಯನ್ನು ಕಚ್ಚಿ ಸಾಯಿಸಿದ ಹಾವನ್ನು ಬೆಂಕಿಯಲ್ಲಿ ಸುಟ್ಟು ಸಾಯಿಸುವುದಕ್ಕೆ ಸರ್ಪಯಾಗ ಮಾಡಿದವನು'